## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ , ಶ್ರೀರಂಗಪಟ್ಟಣ

## ಸಿ.ಸಿ. 107/2017

| | |
|---|---|
| ಸಿ.ಡಬ್ಲ್ಯೂ : | 4 |
| ಪಿ.ಡಬ್ಲ್ಯೂ : | 7 |

| | | |
|---|---|---|
| ಸಾಕ್ಷಿದಾರರ ಹೆಸರು | : | ಸ್ವಾಮಿ |
| ತಂದೆ/ ಪತಿಯ ಹೆಸರು | : | ಕೆಂಚೇಗೌಡ |
| ವಯಸ್ಸು | : | 47 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸ | : | ಹೊಂಗಹಳ್ಳಿ |

## ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 04.02.2026

## ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ನನಗೆ ಆರೋಪಿತರ ಪರಿಚಯ ಇರುತ್ತದೆ. ನನಗೆ ಚಾಸಾ.1 ರಿಂದ 3 ರವರ ಪರಿಚಯ ಇರುತ್ತದೆ. ಸುಮಾರು 9 ವರ್ಷಗಳ ಹಿಂದೆ ನಾನು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾಗ ಬರುವ ರಸ್ತೆಯಲ್ಲಿ ರವಿರವರಿಗೂ ಮತ್ತು ಆರೋಪಿತರಿಗೂ ಗಲಾಟೆ ಆಗುತ್ತಿತ್ತು. ಆರೋಪಿತರು ಅಲ್ಲಿ ಕೂಗಾಡುತ್ತಿದ್ದರು. ಆರೋಪಿತರು ಹಾಗೂ ರವಿರವರುಗಳು ಹೊಡೆದಾಡುತ್ತಿದ್ದು ನಾನು ಹೋಗಿ ಜಗಳವನ್ನು ಬಿಡಿಸಿರುತ್ತೇನೆ. ನಂತರ ಪೊಲೀಸರು ಸ್ಥಳಕ್ಕೆ ಬಂದು ದೊಣ್ಣೆ ಹಾಗೂ ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ. ಸ್ಥಳದಲ್ಲಿ ರವಿ, ಈಶ್ವರ್ ರವರೂ ಸಹಾ ಇದ್ದರು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಈ ಘಟನೆ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

## ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಘಟನಾ ಸ್ಥಳದ ಚೆಕ್ಕು ಬಂದಿ ನನಗೆ ಗೊತ್ತಿರುವುದಿಲ್ಲ, ಆದರೆ ರವಿ ಮತ್ತು ಆರೋಪಿತರ ಜಮೀನು ಇರುತ್ತದೆ. ಘಟನಾ ಸ್ಥಳದ ಸುತ್ತಾ ಮುತ್ತಾ ನನಗೆ ಸೇರಿದ ಜಮೀನು ಇರುವುದಿಲ್ಲ. ನೀವು ರವಿ ರವರ ಕೈ ಕೆಳಗಡೆ ಕೆಲಸ ಮಾಡುತ್ತಿದ್ದಿರೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆನು ಎಂದು ನುಡಿಯುತ್ತಾರೆ. ಗಲಾಟೆಯಾದ ದಿನಾಂಕ ಹಾಗೂ ಮಹಜರ್ ಮಾಡಿದ ದಿನಾಂಕ ನನಗೆ ನೆನಪಿಲ್ಲ.

ನನಗೆ ಈ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ರವಿ ರವರ ಕೈ ಕೆಳಗಡೆ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನೀವು ಪೊಲೀಸ್ ಠಾಣೆಯಲ್ಲಿ ರುಜು ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.